ಓ ಎಸ್ ನಂ. 78/2018
ಪಿ ಡಬ್ಲ್ಯು 1
ದಿನಾಂಕ 04-12-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಸಿ ಎಂ ಜಿ ವಕೀಲರಿಂದಃ

ದಾವಾ ಆಸ್ತಿಗಳು ಹೇಗೆ ಬಂದಿರುತ್ತವೆ ಎಂಬ ವಿಚಾರ ನನಗೆ ತಿಳಿದಿರುತ್ತದೆ. ನಿಪಿ-8 ರ ಎಂ ಆರ್ ನಂತೆ ದಾವಾ ಐಟಂ ನಂ.3 ರ ಸ್ವತ್ತು ಸುಶೀಲಮ್ಮರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸಹ ನಮ್ಮ ಮಾವನ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಸ್ವತ್ತು ಸುಶೀಲಮ್ಮರವರಿಗೆ ಅವರ ತಂದೆಯ ಕಡೆಯಿಂದ ಬಂದ ಸ್ವತ್ತಾಗಿರುತ್ತದೆ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾ ಐಟಂ ನಂ.4 ಮತ್ತು 5 ರ ಸ್ವತ್ತುಗಳು ತಿಮ್ಮಪ್ಪರವರಿಗೆ ಗ್ರಾಂಟ್ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ನಿಪಿ-9 ರಂತೆ ತಿಮ್ಮಪ್ಪರವರಿಗೆ ಗ್ರಾಂಟ್ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-9 ರಂತೆ 1996 ನೇ ಸಾಲಿನಲ್ಲಿ ತಿಮ್ಮಪ್ಪರವರಿಗೆ ಗ್ರಾಂಟ್ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವಾ ಐಟಂ ನಂ.4 ಮತ್ತು 5 ರ ಸ್ವತ್ತುಗಳು ತಿಮ್ಮಪ್ಪರವರ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಅವುಗಳಲ್ಲಿ ನನ್ನ ಮಗಳಿಗೆ ಭಾಗದ ಹಕ್ಕು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ರ ಆಸ್ತಿ ಸುಶೀಲಮ್ಮರವರ ಸ್ವಯಾರ್ಜಿತ ಆಸ್ತಿಯಾಗಿದ್ದು, ಅದರಲ್ಲಿ ನನ್ನ

ಮಗಳಿಗೆ ಹಕ್ಕು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಕುಮಾರಿ ಮೈತ್ರಿ ಆನಂದ್ ರವರಿಗೆ ಜನಿಸಿಲ್ಲದೆ ಇರುವುದರಿಂದ ಅವರಿಗೆ ಆಸ್ತಿಗಳಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಿನಾ ಕಾರಣ ಯಾವುದೇ ಹಕ್ಕು ಇಲ್ಲದೆ ಇದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.